# ಸದಾಚಾರಸ್ಮೃತಿ

ಈ ಲೇಖನದ ವಿಷಯಾನುಕ್ರಮಣಿಕೆ


ದೇವರಿಗೇಕೆ ಕರ್ಮಗಳನ್ನು ಸಮರ್ಪಿಸಬೇಕು 2

ದೇವರು ಅನಿತ್ಯನಲ್ಲ, ಅದಕ್ಕಾಗಿ ಅರ್ಪಿಸಬೇಕು 3

ದೇವರಿಗೆ ದೇಹನಾಶವಿಲ್ಲ, ಅದಕ್ಕಾಗಿ ಅರ್ಪಿಸಬೇಕು 5

ದೇವರಿಗೆ ದುಃಖವಿಲ್ಲ, ಅದಕ್ಕಾಗಿ ಅರ್ಪಿಸಬೇಕು. 8

ದೇವರು ಪರಿಪೂರ್ಣ, ಅದಕ್ಕಾಗಿ ಸಮರ್ಪಿಸಬೇಕು 9

## ದೇವರಿಗೇಕೆ ಕರ್ಮಗಳನ್ನು ಸಮರ್ಪಿಸಬೇಕು

**“ಯಸ್ಮಿನ್ ಸರ್ವಾಣಿ ಕರ್ಮಾಣಿ ಸಂನ್ಯಸ್ಯ ಪರಂ ಯಾತಿ”** ಎಂದು ಶ್ರೀಮದಾಚಾರ್ಯರು ನಾವು ಮಾಡುವ ಸಕಲ ಸತ್ಕರ್ಮಗಳನ್ನೂ ಭಗವಂತನಿಗೆ ಸಮರ್ಪಿಸುವದರಿಂದ ಪರಮಾತ್ಮನ ಪ್ರಾಪ್ತಿಯುಂಟಾಗುತ್ತದೆ ಎಂದು ಹೇಳಿದರು.

ಪರಮಾತ್ಮನಿಗೇ ಯಾಕಾಗಿ ಸಮರ್ಪಿಸಬೇಕು ಎನ್ನುವದಕ್ಕೆ ಆಚಾರ್ಯರು ನೀಡಿದ ಉತ್ತರ — **ಅಚ್ಯುತೋ ಜಯತಿ** ಎಂದು.

ಚ್ಯುತಿ ಎಂದರೆ ನಾಶ, ಕಳೆದುಕೊಳ್ಳುವದು. ಪದವಿಯನ್ನು ಕಳೆದುಕೊಂಡರು ಎನ್ನುವ ಅರ್ಥದಲ್ಲಿ ಪದಚ್ಯುತರಾದರು ಎನ್ನುತ್ತೇವಲ್ಲ ಹಾಗೆ. ಯಾರಲ್ಲಿ ಚ್ಯುತಿ ಇಲ್ಲವೋ ಅವನು ಅಚ್ಯುತ. ಎಂದೆಂದಿಗೂ ನಾಶವಿಲ್ಲದವನು ಎಂದರ್ಥ.

ಏನಿದು ನಾಶ, ಏನಿದು ನಾಶವಿಲ್ಲದಿರುವಿಕೆ ಎನ್ನುವದಕ್ಕೆ ಆಚಾರ್ಯರು ಗೀತಾತಾತ್ಪರ್ಯನಿರ್ಣಯದಲ್ಲಿ ಉತ್ತರ ನೀಡಿದ್ದಾರೆ —

**ಅನಿತ್ಯತ್ವಂ ದೇಹಹಾನಿಃ**
**ದುಃಖಪ್ರಾಪ್ತಿರಪೂರ್ಣತಾ ।**
**ನಾಶಶ್ಚತುರ್ವಿಧಃ ಪ್ರೋಕ್ತಃ**
**ತದಭಾವೋ ಹರೇಃ ಸದಾ ॥**

## ದೇವರು ಅನಿತ್ಯನಲ್ಲ, ಅದಕ್ಕಾಗಿ ಅರ್ಚಿಸಬೇಕು

ಚ್ಯುತಿ ಎಂದರೆ ಸ್ವರೂಪಧ್ವಂಸ. ಪರಮಾತ್ಮ ಎಂದಿಗೂ ವಿನಾಶವಾಗುವದಿಲ್ಲ ಅದಕ್ಕಾಗಿ ಅವನಿಗೆ ಅಚ್ಯುತ ಎಂದು ಹೆಸರು.

ಈ ಜಗತ್ತಿನಲ್ಲಿನ ಮಡಿಕೆ, ಮನೆ, ಮಠಗಳಿಂದ ಆರಂಭಿಸಿ ಬ್ರಹ್ಮಾಂಡದವರೆಗಿನ ಎಲ್ಲವೂ ಅನಿತ್ಯವೇ. ಪರಮಾತ್ಮ ಇವನ್ನು ಸೃಷ್ಟಿಸಿದ್ದಾನೆ. ಆದರೆ ಪ್ರಳಯದ ಕಾಲದಲ್ಲಿ ಇವೆಲ್ಲವೂ ನಾಶವಾಗಿಬಿಡುತ್ತವೆ.

ಪರಮಾತ್ಮನಿಗೂ ಈ ರೀತಿಯಾದ ನಾಶವಿದ್ದಿದ್ದರೆ ನಾವು ಅವನಿಗೆ ಕರ್ಮಗಳನ್ನು ಸಮರ್ಪಣೆ ಮಾಡಿ ಉಪಯೋಗವೇ ಇರುತ್ತಿರಲಿಲ್ಲ. ನಾವು ಕರ್ಮಗಳನ್ನು ಸಮರ್ಪಿಸುತ್ತಿರುವದು ಯಾತಕ್ಕಾಗಿ, ಮೋಕ್ಷದಲ್ಲಿಯೂ ಅದರ ಫಲವನ್ನು ಪಡೆಯುವದಕ್ಕಾಗಿ. ಹೀಗಾಗಿ ನಾವು ಮೋಕ್ಷ ಸೇರಿದಾಗ ಪರಮಾತ್ಮನೇ ಇಲ್ಲದಂತಾಗಿಬಿಟ್ಟರೆ ನಾವು ಸುಖವನ್ನನುಭವಿಸುವದೆಂತು.

ನಾವು ವೃದ್ಧಾಪ್ಯದಲ್ಲಿ ಬದುಕಲಿಕ್ಕಾಗಿ ಹಣವನ್ನು ಕೂಡಿಡುತ್ತೇವೆ. ನಮ್ಮ ವೃದ್ಧಾಪ್ಯದಲ್ಲಿಯೂ ಯಾವ ಸಂಸ್ಥೆ ಇರುತ್ತದೆ ಎಂದು ನಮಗೆ ವಿಶ್ವಾಸವಿದೆಯೋ ಅಂತಹ ಬ್ಯಾಂಕಿನಲ್ಲಿ ಹಣವನ್ನಿಡುತ್ತೇವೆ. ಅದು ಬಿಟ್ಟು ಪಕ್ಕದ ಬೀದಿಯಲ್ಲಿರುವ ವಯಸ್ಸಾದ ವ್ಯಕ್ತಿಯ ಕೈಯಲ್ಲಿ ಹಣ ಕೊಟ್ಟು ನಾನು ಮುದುಕನಾದಾಗ ಬಡ್ಡಿಯನ್ನು ನೀಡುತ್ತಿರು ಎಂದು ಹೇಳುವದಿಲ್ಲ. ಯಾಕೆ, ನಾವು ಮುದುಕರಾಗುವ ವೇಳೆಗೆ ಆ ಮುದುಕನೇ ಇರುವದಿಲ್ಲ. ಹೀಗಾಗಿ ನಮ್ಮ ಕರ್ಮದ ಫಲವನ್ನು ನಾವು ಮರಳಿ ಪಡೆಯಬೇಕೆಂದರೆ ಶಾಶ್ವತನಾಗಿ ಇರುವ ಚೇತನೋತ್ತಮನಿಗೇ ಅರ್ಪಿಸಬೇಕು. ಅಂತಹ

ಉತ್ತಮ ಚೇತನ ನಮ್ಮ ಅಚ್ಯುತ. ಅದಕ್ಕಾಗಿ ಅವನಿಗೆ ಅರ್ಪಿಸೇಬೇಕು. ಅವನು ಹಿಂದೆಯೂ ಇದ್ದ. ಇಂದೂ ಇದ್ದಾನೆ. ಮುಂದೆಯೂ ಇರುತ್ತಾನೆ.

## ದೇವರಿಗೆ ದೇಹನಾಶವಿಲ್ಲ, ಅದಕ್ಕಾಗಿ ಅರ್ಪಿಸಬೇಕು

ಪರಮಾತ್ಮನ ದೇಹನಾಶವಾಗುವದಿಲ್ಲ, ಅದಕ್ಕಾಗಿ ಅವನಿಗೆ ಕರ್ಮಗಳನ್ನು ಸಮರ್ಪಿಸಬೇಕು.

ಚ್ಯುತಿ ಎಂದರೆ ದೇಹದ ವಿನಾಶ. ಅಚ್ಯುತ ಎಂದರೆ ದೇಹದ ವಿನಾಶವಿಲ್ಲದವನು. ಎಲ್ಲ ಜೀವರೂ ದೇವರಂತೆ ಅನಾದಿಕಾಲದಿಂದ ಇದ್ದಾರೆ, ಅನಂತ ಕಾಲದವರೆಗೆ ಇರುತ್ತಾರೆ. ಹಾಗೆ ಪರಮಾತ್ಮನಿಗೂ ದೇಹಪ್ರಾಪ್ತಿ ದೇಹವಿನಾಶಗಳಿದ್ದರೆ, ನಾವು ಕರ್ಮಗಳನ್ನು ಸಮರ್ಪಿಸಿ ಪ್ರಯೋಜನವಿಲ್ಲ.

ಕಾರಣ, ಜೀವನಿಗೆ ದೇಹ-ಪ್ರಾಪ್ತಿ ವಿಯೋಗಗಳು ಉಂಟಾಗುವದೇ ಕರ್ಮಗಳಿಂದ. ದೇವರಿಗೂ ಈ ರೀತಿ ದೇಹ ಪ್ರಾಪ್ತಿ ವಿಯೋಗಗಳು ಇದ್ದಲ್ಲಿ ಅವನೂ ಕರ್ಮಗಳಿಂದ ಬದ್ಧ ಎಂದಾಯಿತು.

ಕರ್ಮಗಳ ಪಾಶದಲ್ಲಿ ಅವನೇ ಸಿಲುಕಿದ್ದರೆ ನಮ್ಮನ್ನು ಉದ್ಧರಿಸುವ ಬಗೆಯೆಂತು. ಕೆಸರಿನಲ್ಲಿ ಮುಳುಗಿದ ಒಬ್ಬ ವ್ಯಕ್ತಿ ಮತ್ತೊಬ್ಬನನ್ನು ಉದ್ಧರಿಸಲು ಸಾಧ್ಯವೇ?

ನಮ್ಮ ದೇವರಿಗೆ ದೇಹದ ಪ್ರಾಪ್ತಿಯೂ ಇಲ್ಲ, ವಿಯೋಗವೂ ಇಲ್ಲ. ಅನಾದಿಕಾಲದಿಂದ ಅನಂತಾನಂತ ರೂಪಗಳಿಂದ ಇದ್ದಾನೆ, ಅನಂತಕಾಲದವರೆಗೆ ಇರುತ್ತಾನೆ. ತಾನು ಅವತರಿಸುವ ಸಂದರ್ಭವಿದ್ದಾಗ ಅವತರಿಸುತ್ತಾನೆ, ನಂತರ ಜನರ ಕಣ್ಣಿನಿಂದ ಮರೆಯಾಗುತ್ತಾನೆಯಷ್ಟೇ ಹೊರತು ಅವನಿಗೆ ಜನ್ಮಮರಣಗಳಿಲ್ಲ. ಅವನು ಅಚ್ಯುತ.

ಮತ್ತೂ, ನಾವು ಒಂದು ದೇಹದಿಂದ ಕರ್ಮ ಮಾಡಿದೆವು. ಪೂರ್ಣ ಮಾಡಲು ಸಾಧ್ಯವಾಗದೆ ಮರಣವನ್ನಪ್ಪಿದೆವು. ನಮ್ಮ ಕರ್ಮಗಳನ್ನೂ ಈ ರೀತಿಯ ಮತ್ತೊಬ್ಬನಿಗೆ ಅರ್ಪಿಸಿದರೆ ಅದರ ಫಲವನ್ನು ನಾವು ಮುಂದೆ ಅನುಭವಿಸುವದೆಂತು. ಅಚ್ಯುತನಿಗೆ ಸಮರ್ಪಿಸಿದರೆ ಆ ಸಮಸ್ಯೆಯಿಲ್ಲ. ಆ ನಮ್ಮ ಅಂತರ್ಯಾಮಿ ಮುಂದಿನ ಜನ್ಮದಲ್ಲಿ ನಮಗೆ

ದೇಹ ಬದಲಾದರೂ ಅವನು ಹಾಗೆಯೇ ಇದ್ದಾನೆ. ಇನ್ನು ಸಾವಿರಾರು ದೇಹಗಳು ನಮಗೆ ಬದಲಾದರೂ ಅವನು ಹಾಗೆಯೇ ಇರುತ್ತಾನೆ. ಇದ್ದು ನಮ್ಮ ಕರ್ಮಗಳ ಫಲವನ್ನು ಅನುಗ್ರಹಿಸುತ್ತಾನೆ. ಅದಕ್ಕಾಗಿ ಅವನಿಗೆ ಸಮರ್ಪಿಸಬೇಕು.

ಮತ್ತೂ, ಅವನ ಕಾರುಣ್ಯ ಇಲ್ಲಿಗೇ ಮುಗಿಯುವದಿಲ್ಲ. ಒಂದು ಉದಾಹರಣೆ ನೋಡಿ — ಈ ಜನ್ಮದಲ್ಲಿ ಗೀತೆಯ 18 ಅಧ್ಯಾಯಗಳಲ್ಲಿ ಎರಡು ಅಧ್ಯಾಯ ಅಧ್ಯಯನ ಮಾಡಿದೆವು. ಸಾವು ಬಂದಿತು. ಮುಂದೆ ಕರ್ಮಗಳ ಅನುಸಾರವಾಗಿ ನಾನಾಯೋನಿಗಳಲ್ಲಿ ಹುಟ್ಟಿದೆವು. ಆ ನಂತರ ಮತ್ತೆ ದೇವರ ಅನುಗ್ರಹದಿಂದ ಬ್ರಾಹ್ಮಣ ಜನ್ಮ ಬಂದಿತು. ಆಗ ಮತ್ತೆ ಮೊದಲಿನಂತೆ ಎರಡು ಅಧ್ಯಾಯಗಳನ್ನು ಅಧ್ಯಯನ ಮಾಡಬೇಕಾಗಿಲ್ಲ. ಅಧ್ಯಯನ ಆರಂಭಿಸುತ್ತಿದ್ದಂತೆ ಹಿಂದೆ ಮಾಡಿದ ಅಧ್ಯಯನದಿಂದ ಬಂದ ಜ್ಞಾನ ಅಭಿವ್ಯಕ್ತವಾಗುತ್ತದೆ. ಮುಂದಿನ ಅಧ್ಯಯನ ಆರಂಭವಾಗುತ್ತದೆ — **ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೈಹಿಕಮ್.**

ಹೀಗೆ, ನಮ್ಮ ಹಿಂದಿನ ಕರ್ಮದ ಫಲವನ್ನೂ ಇಂದಿನ ಪ್ರಯತ್ನಕ್ಕೆ ಸೇರಿಸಿ ಅನುಗ್ರಹಿಸುವ ಸಾಮರ್ಥ್ಯ ಭಗವಂತನಿಗಿದೆಯಾದ್ದರಿಂದ ಅವನಿಗೆ ಕರ್ಮಗಳನ್ನು ಸಮರ್ಪಿಸಬೇಕು.

## ದೇವರಿಗೆ ದುಃಖವಿಲ್ಲ, ಅದಕ್ಕಾಗಿ ಅರ್ಪಿಸಬೇಕು.

ಯಾವುದೋ ದೊಡ್ಡ ಕೆಲಸ ಮಾಡುತ್ತಿರುತ್ತೇವೆ. ಮಧ್ಯದಲ್ಲಿ ಕ್ಷುದ್ರಜನರಿಂದ ಯಾವುದೋ ರೀತಿಯ ದುಃಖ ಒದಗಿಬರುತ್ತದೆ. ಯಾವುದೂ ಬೇಡ ಬಿಡು ಎಂದು ಮನುಷ್ಯ ಸುಮ್ಮನಾಗಿಬಿಡುತ್ತಾನೆ.

ದುಃಖ ಬಂದಾಗ ನಾವು ಮಾಡುವ ಒಳ್ಳೆಯ ಕೆಲಸವನ್ನೂ ನಿಲ್ಲಿಸಿಬಿಡುತ್ತೇವೆ. ಇವತ್ತೇನೋ ದೇವರು ಕರ್ಮಗಳನ್ನು ಸ್ವೀಕರಿಸುತ್ತಿದ್ದಾನೆ, ನಾಳೆ ಯಾವುದೋ ಕಾರಣಕ್ಕೆ ಅವನಿಗೆ ದುಃಖವುಂಟಾಗಿ ಇದ್ಯಾವುದೂ ಬೇಡ ಬಿಡು ಎಂದು ಎಲ್ಲವನ್ನೂ ಬಿಟ್ಟು ಹೊರಟುಬಿಟ್ಟರೆ? ನಮ್ಮ ಗತಿಯೇನು? ಇಷ್ಟೆಲ್ಲ ಕಷ್ಟಪಟ್ಟು ಮಾಡಿದ ಕರ್ಮಗಳೆಲ್ಲ ವ್ಯರ್ಥವಾಗಿಬಿಡುತ್ತದಲ್ಲ ಎಂದರೆ ಆಚಾರ್ಯರು ನೀಡಿದ ಉತ್ತರ ನಮ್ಮ ಸ್ವಾಮಿ ಅಚ್ಯುತ.

ಚ್ಯುತಿ ಎಂದರೆ ದುಃಖಪ್ರಾಪ್ತಿ. ಶ್ರೀಹರಿಗೆ ಹಿಂದೆಯೂ ದುಃಖವಿಲ್ಲ, ಇಂದಿಗೂ ದುಃಖವಿಲ್ಲ, ಮುಂದೆಯೂ ದುಃಖವಿಲ್ಲ. ಅವನ ಸ್ವರೂಪಕ್ಕೆ ದುಃಖವನ್ನು ಪಡೆಯುವ ಅರ್ಹತೆಯೇ ಇಲ್ಲ. ದುಃಖ ಅವನನ್ನು ಸ್ಪರ್ಶಿಸಲೂ ಸಾಧ್ಯವಿಲ್ಲ. ದುಃಖ ಎಂಬ ವಸ್ತುವನ್ನೇ ನಿಯಮಿಸುವ ಮಹಾಸ್ವಾಮಿ ಅವನು. ಹೀಗಾಗಿ ಅವನಿಗೆ ದುಃಖದ ಪ್ರಸಕ್ತಿಯೂ ಇಲ್ಲ, ನಮ್ಮ ಕರ್ಮಗಳು ವ್ಯರ್ಥವಾಗುವ ಭಯವೂ ಇಲ್ಲ.

## ದೇವರು ಪರಿಪೂರ್ಣ, ಅದಕ್ಕಾಗಿ ಸಮರ್ಪಿಸಬೇಕು

ಸರಿ, ನಾವೇನೋ ಕರ್ಮಗಳನ್ನು ಸಮರ್ಪಿಸುತ್ತೇವೆ, ದೇವರು ಫಲ ನೀಡುತ್ತಾನೆ. ಆದರೆ ನಮ್ಮಂತೆ ಒಬ್ಬರಲ್ಲ ಇಬ್ಬರಲ್ಲ ಅನಂತಾನಂತ ಜೀವರಿದ್ದಾರೆ. ಆ ಎಲ್ಲರಿಗೂ ಇಷ್ಟಿಷ್ಟು ಪುಟ್ಟ ಕರ್ಮಗಳಿಗೆ ಅನಂತಾನಂತ ಸುಖವನ್ನು ನೀಡಬೇಕು. ಅದೂ ಅನಂತಕಾಲದವರೆಗೆ. ಅಷ್ಟೆಲ್ಲ ಜನರಿಗೆ ನೀಡುತ್ತನೀಡುತ್ತ ಅವನಲ್ಲಿಯೇ ಕೊರತೆ ಉಂಟಾಗಿಬಿಟ್ಟರೆ?

ಆಚಾರ್ಯರು ಉತ್ತರ ನೀಡಿದರು — ಅವನು ಅಚ್ಯುತ. ಅವನಲ್ಲಿ ಯಾವುದಕ್ಕೂ ಕೊರತೆಯಿಲ್ಲ.

ಚ್ಯುತಿ ಎಂದರೆ ಕೊರತೆ, ಅಪರಿಪೂರ್ಣತೆ. ಯಾರಲ್ಲಿ ಕೊರತೆ ಇಲ್ಲವೋ ಅವನು ಅಚ್ಯುತ.

ಲಕ್ಷ್ಮೀದೇವಿಯಿಂದ ಆರಂಭಿಸಿ ಸಕಲ ಅನಂತಾನಂತ ಮುಕ್ತರೂ ಅನುಭವಿಸುವ ಆನಂದಗಳ ಅನಂತಸಮುದ್ರಗಳ ರಾಶಿಯನ್ನು ಒಂದು ಬಿಂದು ಎಂದು ಲೆಕ್ಕ ಹಾಕಿದರೆ ಆ ಬಿಂದುವಿನ ಮುಂದೆ ಅನಂತಸಮುದ್ರದಷ್ಟಾಗುತ್ತದೆ ಶ್ರೀಹರಿಯ ಆನಂದ. ಅವನು ಪರಿಪೂರ್ಣ. ಅವನಲ್ಲಿ ಯಾವ ಸದ್ಗುಣಗಳೂ ಕೊನೆಯಾಗುವದಿಲ್ಲ. ಆದ್ದರಿಂದ ಒಬ್ಬರಲ್ಲ, ಇಬ್ಬರಲ್ಲ, ಅನಾದಿಕಾಲದಿಂದ ಅನಂತ ಕಾಲದವರೆಗೆ ಅನಂತಾನಂತ ಜೀವರು ಅನಂತ ಕರ್ಮಗಳನ್ನು ಸಮರ್ಪಿಸಿ ಮುಕ್ತರಾದರೂ ಅವರೆಲ್ಲರಿಗೂ ಸುಖವನ್ನು ಅನುಗ್ರಹಿಸುತ್ತಲೇ ನಮ್ಮ ಸ್ವಾಮಿ, ನಮ್ಮ ಅಚ್ಯುತ. ಅದಕ್ಕಾಗಿ ಅವನು ದೊಡ್ಡವನು. ಎಲ್ಲ ದೊಡ್ಡವರಿಗಿಂತ ದೊಡ್ಡವನು. ಅಚ್ಯುತೋ ಜಯತಿ.

ಕ್ಷುದ್ರ ಮನುಷ್ಯರ ಕ್ಷುದ್ರಾತಿಕ್ಷುದ್ರ ಪ್ರಶ್ನೆಗಳಿಗೂ ಉತ್ತರಿಸಿ ಅನುಗ್ರಹಿಸಿದ ಆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಚರಣಗಳಿಗೆ ಸರ್ವಸ್ವವನ್ನೂ ಸಮರ್ಪಿಸಿಕೊಂಡು ಅವರ ಕಾರುಣ್ಯವನ್ನು ಬಯಸೋಣ. ನಮ್ಮ ಕರ್ಮಗಳನ್ನು ಭಗವಂತನಿಗೆ ಸಮರ್ಪಿಸಲು ಆ ಮುಖ್ಯಪ್ರಾಣನನ್ನು ಪ್ರಾರ್ಥಿಸೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491